ಗಂಡಸಿನ ಆಸೆ... ಈ ಸರ್ಕಲ್ ಬಿಟ್ಟು ಬೇರೆ ಯೋಚನೆ ಮಾಡ್ರೀ... ಇಷ್ಟೇನಾ ನಿಮ್ ಕ್ರಿಯೇಟಿವಿಟಿ? ನಿನ್ನೆ ಮೊನ್ನೆ ಬಂದ ಹುಡುಗರು ಏನ್ ಸಖತ್ತಾಗಿ ಕಥೆ ಹೇಳ್ತಾರೆ ಗೊತ್ತಾ?' ಸೆಂದಿಲ್ ತನ್ನಷ್ಟಕ್ಕೆ ತಾನು ರಿಯಲ್ ಟಾಕ್ ಮಾಡ್ತಿದ್ದೀನಿ ಎಂಬ ಹೆಮ್ಮೆಯಲ್ಲಿ ಮಾತು ಬೆಳೆಸುತ್ತಾ ಸಾಗಿದ್ದ.

'ಯ್ಯೋ... ನಿಲ್ಸಯ್ಯ ಕಂಡಿದೀನಿ. ಹೊಸ ಹುಡುಗರಿಗೆ ಏನ್ ಗೊತ್ತು ಅಂತ ಕಥೆ ಹೇಳ್ತಾರೆ? ದಿನಬೆಳಗಾದ್ರೆ ಇವತ್ತಿನ ಹೆಂಗಸರ ಶೋಕಿ ನೋಡಿ ನೋಡಿ ರೋಸಿ ಹೋಗಿರೋನಿಗೆ ಕೇಳಿ ಹೇಳ್ತಾನೆ. ಅಷ್ಟಕ್ಕೂ ಯಾವ ಸೀತಾಮಾತೆ ಕಥೆ ಕ್ರೈಂಸ್ಟೋರಿಗೆ ಬರೀಲಿ? ಇರು.. ಇರು.. ನಾಳೆ ನಿನ್ನ ಹೆಂಡ್ತಿ ಬಗ್ಗೆನೇ ಒಂದ್ ಎಪಿಸೋಡ್ ಮಾಡಿಸ್ತೀನಿ ನೋಡ್ತಿರು...' ಪ್ರಮಥನಾಥ ತಲೆಸೊಟ್ಟ ಮಾಡಿ ಒಂದು ಬಗೆಯ ಕುತ್ಸಿತ ನಗೆ ತೇಲಿಸಿ ಈ ಮಾತು ಹೇಳುತ್ತಿದ್ದಂತೆಯೇ ಸೆಂದಿಲ್ ಕತ್ತಿನ ಪಟ್ಟಿಗೆ ಕೈ ಹಾಕಿದ್ದ. ಮಾತು ಬಹುವಚನದಿಂದ ಏಕವಚನಕ್ಕೆ ತಿರುಗಿದ್ದಕ್ಕೋ, ತನ್ನ ಹೆಂಡತಿಯ ನಡತೆಯ ಬಗೆಗಿನ ಗಾಳಿಸುದ್ದಿಯ ಬುಡಕ್ಕೆ ಬಂದಿದ್ದಕ್ಕೋ ಅಂತೂ ಸೆಂದಿಲ್ ರೊಚ್ಚಿಗೆದ್ದಿದ್ದ. ಕ್ಯಾಬಿನ್ನಿನ ಒಳಗೆ ನಡೆಯುತ್ತಿದ್ದ ಇವರ ಜಟಾಪಟಿ ನೋಡಿ ಹುಡುಗರು ಬಿಡಿಸಿ ಕಳಿಸಿದ್ದರು. ಒಂದರ ಮೇಲೊಂದು ಹಲ್ಲು ಹುಟ್ಟಿ ಮುಖಕ್ಕೆಲ್ಲ ಬಾಯಿ ಮತ್ತು ಹಲ್ಲೇ ಪ್ರಧಾನವಾಗಿ ಕಾಣುವ ಅವನು ಹಲ್ಲುಕಚ್ಚಿ ಹತ್ತಿರ ಬಂದಾಗಿನ ಆಕ್ರೋಶದ ಮುಖ ಮತ್ತು ಬೆವರಿನ ಘಾಟಿಗೆ ಹೇವರಿಸಿಕೊಂಡಿದ್ದ ಪ್ರಮಥನಾಥ. ಕತ್ತಿನ ಪಟ್ಟಿ ಹಿಡಿಯಲು ಬಂದಾಗ ಸೋಕಿದ ಉಗುರು ತಾಗಿ ಬರೆ ಎಳೆದಂತಾಗಿತ್ತು. ಮನೆಯೊಳಗೂ ಕಿತ್ತಾಟ, ಕೆಲಸದಲ್ಲೂ ಅಶಾಂತಿ ಅದೇನು ಪುಣ್ಯ ಮಾಡಿ ಹೆತ್ತಳೋ ನನ್ನಮ್ಮ ಎಂಬ ಸ್ವಾನುಕಂಪದ ಎಳೆ ಮೀಟುತಿತ್ತು. ಐದನೇ ಮಹಡಿಯಲ್ಲಿರುವ ಆಫೀಸಿನ ಕಿಟಕಿಯಿಂದ ಕೆಳಗೆ ನೋಡಿದರೆ, ಬಿಸಿಲನ್ನು ಹಾಸಿ ಹೊದ್ದ ನಿರ್ಮಾನುಷ ರಸ್ತೆ. ಯಾರೊಂದಿಗೂ ಮಾತು ಬೇಡ ಎನ್ನಿಸಿದ ಬೆನ್ನಲ್ಲೇ ಇಂದು ಶಮಿತಾಳ ಬಳಿ ತುಂಬ ಮಾತನಾಡಬೇಕು ಅನ್ನಿಸಿತು. ಶಮಿ ಡಿಗ್ರಿ ಮುಗಿಸಿ ಐದಾರು ವರ್ಷ ಎಂದರೆ ಇಪ್ಪತ್ತೇಳು ಇಪ್ಪತ್ತೆಂಟರಬೇಕು. ಸಣ್ಣ ಊರಿನ ಹುಡುಗಿಯರ ಕಣ್ಣಲ್ಲಿನ ಮುಗ್ಧ ಹೊಳಪು, ಸಂಕೋಚ, ಪಾಲಿಷ್ ಆಗದ ಭಾಷೆ, ಪ್ರೀತಿ ಪ್ರೇಮದ ಬಗೆಗಿನ ಆಸೆ ಮತ್ತು ಭಯವನ್ನು ಸಮತೋಲಿಸುವ ನಡೆ ಅವನಲ್ಲಿ ನೂರು ರಾಗಗಳನ್ನು ಹಾಡಿಸುತ್ತಿತ್ತು. ಇನ್ನು ಆರು-ಏಳು ವರ್ಷಕ್ಕೆ ಮಗಳ ಮದುವೆ ಮಾಡಬೇಕಿರುವ ವಯಸ್ಸಿನಲ್ಲಿ ಎಳೆ ಹುಡುಗಿಯರ ಮೇಲೆ ಪ್ರೀತಿ, ಪ್ರೇಮ, ಆಕರ್ಷಣೆ ಹುಟ್ಟಿಸಿಕೊಳ್ಳುವುದು ಅಸಹ್ಯ. ಆದರೆ ನಲವತ್ತರ ನಂತರ ಹರೆಯ ಮರುಕಳಿಸುತ್ತೆ ಅಂತಾರಲ್ಲ ನಿಜವೇ ಇರಬಹುದು. ಮನೆಯೊಳಗೆ ಹೆಂಡತಿ ಅನ್ನಿಸಿಕೊಂಡಾಕೆ ಸರಿಯಿದ್ದರೆ ಬಹುಶಃ ಹೀಗೆಲ್ಲ ಆಗಲಿಕ್ಕಿಲ್ಲ. ವಿನುತಾಳಲ್ಲಿ ಎಂದಿಗೂ ಕಾಣದ ಮುಗ್ಧ, ನಿರ್ಮಲ ಪ್ರೇಮವು ಇಷ್ಟು ವರ್ಷಗಳ ನಂತರವೂ ಅಲ್ಲಿ ಇಲ್ಲಿ ಹುಡುಕುವಂತೆ ಪ್ರೇರೇಪಿಸುತ್ತಿದೆ ಎಂಬ ವಾದವೊಂದು ತಲೆಯಲ್ಲಿ ಮೊಳೆಯಿತು. ಎಂದಿನಂತೆ ಶಮಿಗೆ ಕಾಲ್ ಮಾಡಿ ಟೀಗೆ ಬರ್ತೀಯಾ ಎಂದಿದ್ದ. ಸಂಜೆ ಐದರ ಚಹಾ ಮಧ್ಯಾಹ್ನ ಮೂರೂವರೆಗೆ ಗಂಟಲು ಸೇರುವಂತಾಯ್ತು. ಹೊಗೆಯ ಅಮಲಿನಲ್ಲಿರುವಾಗಲೇ 'ಐ ಲವ್ ಯೂ' ಎಂದಿದ್ದ. ದೂಳು ಕೊಡವಿದಂತೆ ಆ ಮಾತನ್ನು ಕೊಡವಿ ಹೊರಟ ಶಮಿಯ ಸೊಕ್ಕು ಉರಿಸತೊಡಗಿತು.

ಮುದ್ರಣ ಮಾಧ್ಯಮದ ಶಮಿತಾಗೂ ದೃಶ್ಯ ಮಾಧ್ಯಮದ ಪ್ರಮಥನಾಥನಿಗೂ ಹೀಗೊಂದು ಸ್ನೇಹವೋ ಸಂಬಂಧವೋ ಏರ್ಪಟ್ಟಿದ್ದು ರಾಜಣ್ಣನ ಟೀ ಅಂಗಡಿಯ ಮುಂದಾದರೂ ಬೆಳೆದಿದ್ದು ಫೋನಲ್ಲೇ. ಪಿಜಿಯಲ್ಲಿದ್ದುಕೊಂಡು ಊರಿಗೆ ಹಣ ಕಳಿಸುತ್ತಾ, ತನ್ನಷ್ಟಕ್ಕೆ ತಾನಿದ್ದ ಶಮಿತಾಗೆ ಹೇಳಿಕೊಳ್ಳುವಂತಹ ಗೆಳತಿಯರಿರಲಿಲ್ಲ. ಅಥವಾ ಅವಳ ಬದುಕಿನ ಯಾವೊಂದು ಪ್ರಮುಖ ವಿವರವನ್ನೂ ಅವಳು ಬಿಟ್ಟುಕೊಟ್ಟಿರಲಿಲ್ಲ. ಕೆಲಸದ ಕಷ್ಟ ಸುಖ, ಚೂರುಪಾರು ರಾಜಕೀಯ, ಊರು, ಅಮ್ಮನ ಅಡುಗೆ, ಹೊಸ ಸಿನಿಮಾ ಅಂತ ಅವರ ನಡುವಿದ್ದ ಆ ಹೊತ್ತಿಗೆ ತೋಚಿದ ನಾಲ್ಕು ಮಾತಿಗೆ ಯಾವ ವಿಶೇಷವನ್ನೂ ಶಮೀ ಆರೋಪಿಸಿರಲಿಲ್ಲ. ಇಷ್ಟವಾದ ರೀಲ್ಸ್, ಕಾಮಿಡಿ, ಪುಸ್ತಕ ಪರಿಚಯ, ಸಿನಿಮಾ ರಿವ್ಯೂ ಇತ್ಯಾದಿಗಳು ಅವರ ನಡುವೆ ವಿನಿಮಯವಾಗುತ್ತಿತ್ತು. ಇವನಿಂದಾಗಿ ತಾನೊಬ್ಬಳೇ ಆಸ್ವಾದಿಸಬೇಕಾದ ಚಹಾ ಮತ್ತು ಏಕಾಂತದ ವಿರಾಮವನ್ನು ಅವಳು ಕಳೆದುಕೊಳ್ಳುವಂತಾಗಿತ್ತು. ಅವತ್ತಿನ ಲಹರಿಗೆ ಅನುಗುಣವಾಗಿ ಹೊಗಳುವ, ಆಡಿಕೊಳ್ಳುವ, ಮನಬಿಚ್ಚಿ ನಗುವ, ಕೆಲವೊಮ್ಮೆ ಇಕ್ಕಟ್ಟಿನಲ್ಲಿ